ದಿನಾಂಕ 20.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಎದುರುದಾರರ ಪರ ವಕೀಲರಾದ ಶ್ರೀಮತಿ ಎ.ಬಿ ರವರಿಂದಃ-**

ನಾನು ಪರಿಹಾರ ಕೋರುತ್ತಿರುವ ವಾಹನ 2003 ರ ಮೋಡಲ್ ಆಗಿದ್ದು, ಅದಕ್ಕೆ ವಿಮಾ ಪಾಲಿಸಿ ಮಾಡಿಸಿದ್ದೇನು. ನಾನು ವಾಹನದ ನೋಂದಣಿ ಪ್ರಮಾಣಪತ್ರ ಮತ್ತು ವಿಮಾ ಪಾಲಿಸಿಯನ್ನು ಹಾಜರುಪಡಿಸಿರುತ್ತೇನೆ. ನಾನು ವಿಮಾ ಪಾಲಿಸಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾಹನಕ್ಕೆ 3 ನೇ ಪಾರ್ಟಿ ಇನ್ಶೂರೆನ್ಸ್ ಅನ್ನು ಮಾಡಿಸಿರುತ್ತೇನೆ. ಅಪಘಾತವಾದ ಸಂದರ್ಭದಲ್ಲಿ ನನ್ನ ವಾಹನದ ಮಾರುಕಟ್ಟೆಯ ಮೌಲ್ಯ ಅಂದಾಜು 5-6 ಲಕ್ಷ ಮೌಲ್ಯ ಇತ್ತು. ವಿಮಾ ಪಾಲಿಸಿಯ ಪ್ರೀಮಿಯಮ್ ಮೊತ್ತ ಕಡಿಮೆ ಇದುದ್ದರಿಂದ ವಾಹನಕ್ಕೆ 3 ನೇ ಪಾರ್ಟಿ ಇನ್ಶೂರೆನ್ಸ್ ಮಾಡಿಸಿದ್ದೆನು. ಅಪಘಾತ ಸಂದರ್ಭದಲ್ಲಿ ನನ್ನ ಜೀಪನ್ನು ಹೆಚ್.ಎಲ್ ಶ್ರೀನಿವಾಸ್ ರವರು ಚಲಾಯಿಸುತ್ತಿದ್ದರು. ಅವರು ಕೊಡುಗಿಗೆ ಬಂದ ಸಂದರ್ಭದಲ್ಲಿ ನನ್ನ ಜೀಪನ್ನು ಚಲಾಯಿಸುತ್ತಿದ್ದರು. ಅವರಿಗೆ ಚಾಲನಾ ಪರವಾನಗಿ ಇತ್ತು. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವು ನನ್ನ ಸ್ನೇಹಿತನ ಅಜಾಗರೂಕತೆ ಮತ್ತು ನಿರ್ಲಕ್ಷ್ಯ ತನದಿಂದ ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದ

ಸಂದರ್ಭದಲ್ಲಿ ಜೀಪನ್ನು 40-50 ಕಿ.ಮೀ ವೇಗದಲ್ಲಿ ನನ್ನ ಸ್ನೇಹಿತ ಚಲಾಯಿಸುತ್ತಿದ್ದನು.

ನಾನು ನನ್ನ ಜೀಪನ್ನು ಮೈಸೂರಿನಲ್ಲಿ ರಿಪೇರಿ ಮಾಡಿಸಿರುತ್ತೇನೆ. ಸರ್ವೇಯರ ರವರನ್ನು ಯಾರು ನೇಮಕ ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಸರ್ವೇಯರ ರವರು ವರ್ಕ್‌ಶಾಪ್ ಗೆ ಬಂದು ಜೀಪನ್ನು ತಪಾಸಣೆ ಮಾಡಿರುತ್ತಾರೆ. ಅವರು ವರದಿ ನೀಡಿದ ದಿನಾಂಕ ನನಗೆ ನೆನಪಿಲ್ಲ. ನಾನು ನಿ.ಪಿ 9 ದಾಖಲೆಯನ್ನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸುವ ಎರಡು ದಿನಗಳ ಹಿಂದೆ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೇಯರ ರವರು ಫೋಟೋಗಳನ್ನು ವರದಿಯೊಂದಿಗೆ ನನಗೆ ನೀಡಿರುತ್ತಾರೆ. ಸದರಿ ಫೋಟೋಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ 10 ರಿಂದ 13 ದಾಖಲೆಗಳಲ್ಲಿ ನನ್ನ ಹೆಸರು ಇರುವುದಿಲ್ಲ ಎಂದರೆ ಸರಿ. ನಿ.ಪಿ 10 ರಿಂದ 13 ದಾಖಲೆಗಳಲ್ಲಿನ ಮೊತ್ತವನ್ನು ನಾನು ಪಾವತಿ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ಅರ್ಜಿಯಲ್ಲಿ ಕೋರಿರುವಷ್ಟು ನಷ್ಟ ನನಗೆ ಆಗದೇ ಇರುವುದರಿಂದ ಅಷ್ಟು ಪರಿಹಾರವನ್ನು ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಅಪಘಾತವು 1 ನೇ ಎದುರುದಾರರ ನಿರ್ಲಕ್ಷ್ಯ ತನದಿಂದ ಉಂಟಾಗಿಲ್ಲದೇ ಇರುವುದರಿಂದ 3 ನೇ ಎದುರುದಾರರು ನಾನು ಕೇಳಿರುವಷ್ಟು ಪರಿಹಾರವನ್ನು ನೀಡಲು ಭಾದ್ಯರಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರನಿಗೆ ಚಾಲನಾ ಪರವಾನಗಿ ಇಲ್ಲದೇ ಇದುದ್ದರಿಂದ

3 ನೇ ಎದುರುದಾರರು ಪರಿಹಾರವನ್ನು ನೀಡಲು ಭಾದ್ಯರಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>- ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.